ದಿನಾಂಕಃ **26/02/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎಸ್.ಹೆಚ್.ಆರ್ ವಕೀಲರಿಂದಃ

1. ನನಗೆ 1ನೇ ವಾದಿ ಸತ್ಯನಾರಾಯಣ ರವರು ಗೊತ್ತು. ಸದರ ಸತ್ಯನಾರಾಯಣ ರವರ ತಾಯಿಯ ಹೆಸರು ದ್ಯಾವಮ್ಮ. ಅವರ ತಾಯಿಯ ಹೆಸರು ಅನುಸೂಯ ಎಂದರೆ ಸರಿಯಲ್ಲ. ಸತ್ಯನಾರಾಯಣ ರವರ ತಂದೆಯ ಹೆಸರು ನಲ್ಲೂರೇಗೌಡ ಎಂದರೆ ಸರಿಯಲ್ಲ ಆದರೆ ಅವರ ಹೆಸರು ನಲ್ಲೂರಯ್ಯ ಎಂದು ನುಡಿಯುತ್ತಾರೆ. ಸತ್ಯನಾರಾಯಣ ರವರ ಅಜ್ಜನ ಹೆಸರು ಸಣ್ಣದು @ ನಲ್ಲೂರ ಎಂದರೆ ಸಾಕ್ಷಿದಾರರು ಸಣ್ಣದಯ್ಯ ಎಂದು ನುಡಿಯುತ್ತಾರೆ. ಸದರಿ ಸಣ್ಣದು @ ನಲ್ಲೂರ ರವರಿಗೆ ಅಣ್ಣ ತಮ್ಮಂದಿರು ಯಾರು ಇರಲಿಲ್ಲ. ಸಣ್ಣದು @ ನಲ್ಲೂರ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ.

2. 4 ರಿಂದ 7ನೇ ವಾದಿಯರು ನನಗೆ ಗೊತ್ತು. 4 ರಿಂದ 7ನೇ ವಾದಿಯರ ತಾಯಿಯ ಹೆಸರು ನನಗೆ ಗೊತ್ತಿಲ್ಲ. 4 ರಿಂದ 7ನೇ ವಾದಿಯರ ತಂದೆಯ ಹೆಸರು ಪುಟ್ಟಯ್ಯ. 3ನೇ ವಾದಿ ಸಣ್ಣಮ್ಮ ರವರು 4 ರಿಂದ 7ನೇ ವಾದಿಯವರ ತಾಯಿ ಎಂದರೆ ಸರಿ. ಪುಟ್ಟಯ್ಯ ಹಾಗೂ 3ನೇ ವಾದಿ ಸಣ್ಣಮ್ಮ ರವರಿಗೆ ಹೆಣ್ಣು ಮಕ್ಕಳು ಇರಲಿಲ್ಲ. ಎ.ಎನ್.ಪಾಪಣ್ಣ ಮೇಲೆ ಹೇಳಿದ ಪುಟ್ಟಯ್ಯ ರವರ ತಮ್ಮ ಎಂದರೆ ಸರಿ. ಸದರಿ ಪಾಪಣ್ಣ ಹಾಗೂ ಪುಟ್ಟಯ್ಯ ಜೀವಂತ ಇರುವುದಿಲ್ಲ. ಎ.ಎನ್.ಪಾಪಣ್ಣ ಹಾಗೂ ಪುಟ್ಟಯ್ಯ ರವರ ಚಿಕ್ಕಪ್ಪ ಸಣ್ಣದು @ ನಲ್ಲೂರ ಸಹ ಜೀವಂತ ಇರುವುದಿಲ್ಲ. ಎ.ಎನ್.ಪಾಪಣ್ಣ ಹಾಗೂ ಪುಟ್ಟಯ್ಯ ರವರ ತಂದೆ ನಲ್ಲೂರಯ್ಯ @ ನಲ್ಲೂರ ರವರೂ ಸಹ ಜೀವಂತ ಇಲ್ಲ. ನಲ್ಲೂರ @ ನಲ್ಲೂರಯ್ಯ ರವರ ತಂದೆ ಕಳಸೀಪುಟ್ಟಯ್ಯ @ ಮಾಳಿಗ ಸಹ ಜೀವಂತ ಇಲ್ಲ. ಎ.ಎನ್.ಪಾಪಣ್ಣ ಹಾಗೂ ಪುಟ್ಟಯ್ಯ ರವರ ಚಿಕ್ಕಪ್ಪ ಸಣ್ಣದು @ ನಲ್ಲೂರ ಮೊದಲು ತೀರಿಕೊಂಡರು, ನಂತರ ಎ.ಎನ್.ಪಾಪಣ್ಣ ಹಾಗೂ ಪುಟ್ಟಯ್ಯ ರವರ ತಂದೆ ನಲ್ಲೂರ @ ನಲ್ಲೂರಯ್ಯ ತೀರಿಕೊಂಡರು ಎಂದರೆ ಸರಿ. ಎ.ಎನ್.ಪಾಪಣ್ಣ, ಪುಟ್ಟಯ್ಯ ನವರ ಅಜ್ಜ ಕಳಸೀಪುಟ್ಟಯ್ಯ @ ಮಾಳಿಗ ರವರು ಸಹ ತೀರಿಕೊಂಡಿರುತ್ತಾರೆ ಎಂದರೆ ಸರಿ. ಎ.ಎನ್.ಪಾಪಣ್ಣ ರವರಿಗೆ ಮಕ್ಕಳು ಇದ್ದಾರೊ ಇಲ್ಲವೋ ನನಗೆ ಗೊತ್ತಿಲ್ಲ. ಎ.ಪಿ.ಗಣೇಶ ರವರು

ಗೊತ್ತು. ಅವರ ತಮ್ಮಂದಿರು ಎ.ಪಿ.ಪ್ರಕಾಶ, ಎ.ಪಿ.ಮಂಜುನಾಥ, ಎ.ಪಿ.ಚಂದ್ರಶೇಖರ ಎಂದರೆ ಸರಿ. ಎ.ಪಿ.ಗಣೇಶ ರವರ ತಂದೆ ಪಾಪಣ್ಣ ಎಂದರೆ ಸರಿ. ಎ.ಪಿ.ಗಣೇಶ ರವರು ತೀರಿಕೊಂಡಿದ್ದು ಜೀವಂತ ಇರುವುದಿಲ್ಲ. ಅವರ ಹೆಂಡತಿ ಮಂಗಳ ಜೀವಂತ ಇದ್ದಾರೆ. ಅವರು ಈ ದಾವೆಯ 8ನೇ ವಾದಿ. ಎ.ಪಿ.ಗಣೇಶ ರವರಿಗೆ ಒಬ್ಬನೇ ಮಗ, ಆತನ ಹೆಸರು ಶ್ರೀನಿವಾಸ. ಮಂಗಳ ಹಾಗೂ ಶ್ರೀನಿವಾಸ ರವರು ಒಟ್ಟಾಗಿ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಎ.ಪಿ.ಮಂಜುನಾಥ ರವರು ಜೀವಂತ ಇರುವುದಿಲ್ಲ. ಇವರ ಹೆಂಡತಿ ಮೀನಾಕ್ಷಿ ಜೀವಂತ ಇದ್ದು, ಅವರು ಈ ದಾವೆಯ 10ನೇ ವಾದಿ ಎಂದರೆ ಸರಿ. ಎ.ಪಿ.ಮಂಜುನಾಥ ರವರಿಗೆ ಮಕ್ಕಳು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಎ.ಪಿ.ಗಣೇಶ ರವರ ತಮ್ಮ ಎ.ಪಿ.ಪ್ರಕಾಶ ರವರು ತೀರಿಕೊಂಡಿದ್ದಾರೆ. ಅವರ ಹೆಂಡತಿಯ ಹೆಸರು ಪ್ರೇಮ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರೇಮ ಈ ದಾವೆಯ 9ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. 9ನೇ ವಾದಿ ಅರಕಲಗೂಡು ಪಟ್ಟಣ ಪಂಚಾಯಿತಿಯ ಕೌನ್ಸಿಲರ್ ಎಂದರೆ ಸರಿ. ಎ.ಪಿ.ರಮೇಶ ರವರು ಎ.ಪಿ.ಗಣೇಶ ರವರ ತಮ್ಮ ಎಂದರೆ ಸರಿ. ಅವರು ಈ ದಾವೆಯ 11ನೇ ವಾದಿ ಎಂದರೆ ಸರಿ. ಎ.ಪಿ.ಗಣೇಶ ರವರ ಕೊನೆಯ ತಮ್ಮ ಎ.ಪಿ.ಚಂದ್ರಶೇಖರ ಎಂದರೆ ಸರಿ. ಎ.ಪಿ.ಚಂದ್ರಶೇಖರ ರವರು ತೀರಿಕೊಂಡಿರುತ್ತಾರೆ. ಎ.ಪಿ.ಚಂದ್ರಶೇಖರ ರವರ ಹೆಂಡತಿಯ ಹೆಸರ ರಾಜೇಶ್ವರಿ ಎಂದರೆ ಸರಿ. ಅವರು ಈ ದಾವೆಯ 12 ನೇ ವಾದಿ ಎಂದರೆ ಸರಿ. ಎ.ಎನ್.ಪಾಪಣ್ಣ ರವರಿಗೆ ಹೆಣ್ಣು ಮಕ್ಕಳು ಇರಲಿಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು